ಅಚಾನಕ್ ಬಂದಿಳಿದ ಮುದ್ದಿನ ಮೊಮ್ಮಗಳನ್ನು ಕಂಡು ಎಲ್ಸಿ ಪೆರೇರಾ ಖುಷಿಯಿಂದ ಕುಣಿದಾಡಿಬಿಟ್ಟಳು. ಸಂಜೆಯವರೆಗೆ ಅಡಿಗೆ ಮನೆಯಲ್ಲಿ ರೋಸ್ ಇಷ್ಟಪಡುವ ಖಾದ್ಯಗಳ ತಯಾರಿಯ ಭರಾಟೆ. ಸಂಜೆ ಡಿನ್ನರ್ ಟೇಬಲ್ಲಿನಲ್ಲಿ ಮೂರು ಜನ ಒಟ್ಟಿಗೆ ಊಟಕ್ಕೆ ಕೂತು ಊಟ ಮಾಡಿದ ಮೇಲೆ, 'ಅಜ್ಜೀ' ಅಂತ ಮಾತು ತೆಗೆದ ಮೊಮ್ಮಗಳು ಏನೂ ಮಾತಾಡದೆ ಮೌನವಾಗಿ ಕುಳಿತಾಗ, 'ಏನು ಬಂಗಾರ? ಏನು ಹೇಳಬೇಕಿದೆ ನಿನಗೆ?' ಅಂದರು. 'ಅದು...' ಅಂದಾಗ, 'ಏನದು?' ಅಂದರು. 'ತಡಿ, ಈಗ ನಂಗೆ ಮಾತಾಡಕ್ಕಾಗ್ತಿಲ್ಲ. ಬೆಳಗ್ಗೆ ಹೇಳ್ತೀನಿ' ಅಂದು ಉಗುಳು ನುಂಗಿಕೊಂಡಳು. ಅಜ್ಜಿ ಹೆಚ್ಚು ಒತ್ತಾಯಿಸಲಿಲ್ಲ. ಹರೆಯದ ಮೊಮ್ಮಗಳ ಒಳಗುದಿ, ಅಹವಾಲು ಎಂಥದ್ದಿರುತ್ತೆಂದು ಊಹಿಸಬಲ್ಲವಳಾಗಿದ್ದಳು. ಆ ರಾತ್ರಿ ಅಜ್ಜಿ ತಾತ ಮಲಗಿದ ಮೇಲೆ ಪಕ್ಕದ ಮನೆಯ ಮೂರ್ತಿಗೊಂದು ಮೆಸೇಜ್ ಹಾಕಿದಳು – 'ಬರ್ತೀಯ ನಾನು ಮೈಸೂರಿಗೆ ಬಂದಿದ್ದೇನೆ' ಅಂತ. 'ಓ... ಯಾವಾಗ ಬಂದೆ? ನಂಗೆ ಹೇಳಲೇ ಇಲ್ಲ. ಅದೇನು ಇದ್ದಕ್ಕಿದ್ದಂತೆ?' ಅಂತ ಮರು ಮೆಸೇಜಿಸಿದ. 'ಈಗ ಬರ್ತೀಯ ಇಲ್ವ... ಅಷ್ಟೆ' ಅಂದಳು. 'ಈಗ ಬಂದೆ, ಐದು ನಿಮಿಷ' ಅಂತ ಒಕ್ಕಣಿಸಿದ.

ರಾತ್ರಿ ಹತ್ತರ ಸಮೀಪದ ಸಮಯ. ವರಾಂಡದ ಹೆಬ್ಬಾಗಿಲು ತೆರೆದಿಟ್ಟು, ಅಲ್ಲಿದ್ದ ಬೆತ್ತದ ಸೋಫಾದಲ್ಲಿ ಕುಳಿತು ಅವನನ್ನು ನಿರೀಕ್ಷಿಸತೊಡಗಿದಳು. ಹೇಳಿದಂತೆ ಐದೇ ನಿಮಿಷಕ್ಕೆ ಬಂದ. ರಾತ್ರಿಯುಡುಪಿನಲ್ಲಿದ್ದವನನ್ನು ಅಕ್ಕರೆಯಿಂದ ನೋಡಿ ನಸುನಕ್ಕು, 'ಹಲೋ' ಎಂದಳು. 'ಹಲೋ ಅದೇನು ಇದ್ದಕ್ಕಿದ್ದಂತೆ?' ಅಂದವನ ಮಾತನ್ನು ಅರ್ಧಕ್ಕೆ ತಡೆಯುತ್ತಾ, 'ನಿನ್ನನ್ನೇ ನೋಡಲು ಬಂದೆ' ಅಂದಳು. ಅಚ್ಚರಿಯಿಂದ ಹುಬ್ಬೇರಿಸಿ, 'ನನ್ನನ್ನ?' ಅನ್ನುತ್ತಾ ಎದುರಿನ ಸೋಫಾದಲ್ಲಿ ಕುಳಿತ. 'ಎಲ್ಲಿ ಅಜ್ಜಿ ತಾತಾ?' ಅಂತ ಕೇಳಿದವನಿಗೆ ಎರಡೂ ಕೈಗಳನ್ನು ಕೂಡಿಸಿ ಕೆನ್ನೆಯ ಪಕ್ಕವಿಟ್ಟು ಕತ್ತು ಬಾಗಿಸಿದಳು. 'ಓ... ಹೌದಲ್ವ ಹೊತ್ತು ತುಂಬಾ ಆಗಿದೆಯಲ್ಲ ಸರಿ... ಅದೇನು ನನ್ನನ್ನು ನೋಡಲು ಬಂದಿದ್ದು?' ಅಂದ.

'ಅದೂ... ನಂಗೆ ಮದ್ವೆ ಮಾಡಬೇಕಂತಿದಾರೆ ಅಮ್ಮ; ಮೊನ್ನೆ ಅವರ ಸಂಬಂಧದ ಹುಡುಗನ್ನ ಮನೆಗೆ ಕರೆಸಿದ್ರು' ಎಂದು ನಿಧಾನದಲ್ಲಿ ಹೇಳುತ್ತಾ ಅವನ ಮುಖವನ್ನೇ ಗಮನಿಸಿದಳು. ಬಣ್ಣಕಳೆದುಕೊಂಡು ಪೇಲವವಾದಂತೆನಿಸಿತವಳಿಗೆ. ಅವನು ತುಸು ನೀರಸವಾಗಿ, 'ಹೌದ? ವೆರಿಗುಡ್, ಹುಡುಗ ಚೆನ್ನಾಗಿದಾನ?' ಅಂದ. 'ಹುಂ... ಚೆನ್ನಾಗಿದಾನೆ' ಅನ್ನುತ್ತಾ ಪರೀಕ್ಷಕ ನೋಟವೊಂದನ್ನು ಅವನತ್ತ ತೂರಿದಳು. 'ಸರಿ, ಏನು ಮಾಡ್ಕೊಂಡಿದಾನೆ' ಅನ್ನುವಾಗ ಅವನ ದನಿ ತುಸು ಏರಿಳಿತ ಕಂಡಿತ್ತೆನಿಸಿತವಳಿಗೆ. 'ಅವನು ಎಂ.ಎಸ್. ಮಾಡಿ ಸಿಯಾಟಲ್‌ನಲ್ಲಿ ಸೆಟಲ್ ಆಗಿದ್ದಾನೆ. ಮೈಕ್ರೋಸಾಫ್ಟ್‌ನಲ್ಲಿ ಕೆಲಸ. ಪೇರೆಂಟ್ಸ್ ಕೊಚಿನ್‌ನಲ್ಲಿದ್ದಾರೆ' ಅಂದಳು. ಅರೆಕ್ಷಣ ಮೌನವಾದವನು, 'ಯೂ ಆರ್ ಎನ್ ಏಂಜಲ್. ನಿಂಗೆ ಅದಕ್ಕಿಂತ ಕಮ್ಮಿ ಸಿಗಬಾರದು; ಯೂ ಡಿಸರ್ವ್ ದ ಬೆಸ್ಟ್ ಇನ್ ಲೈಫ್' ಎನ್ನುವಾಗ ಅವನ ಕಣ್ಣಂಚು ಲೇಸಾಗಿ ತುಂಬಿದ್ದು ಆ ರಾತ್ರಿಯ ಮಂದಬೆಳಕಲ್ಲೂ ಅವಳಿಗೆ ಗೋಚರಿಸಿತು. ಈಗವಳು ಆರ್ದ್ರವಾಗಿ, 'ನೀನು ಸ್ವಲ್ಪ ಅಪ್‌ಸೆಟ್ ಆದ ಹಾಗೆನಿಸುತ್ತೆ, ಹೌದ?' ಅಂದಳು. ಅವನ ಕಣ್ಣಿಂದ ಪಟಪಟನೆ ಹನಿಯುದುರಿತು. ಪ್ರಯಾಸದಿಂದ, 'ಇಲ್ಲ... ಹಾಗೇನು ಇಲ್ಲ. ವೆರಿ ಹ್ಯಾಪಿ ಫಾರ್ ಯು' ಅಂದ. 'ಹ್ಯಾಪಿಯಾದ ಮುಖವಾ ಇದು? ವೈ ಡು ಯು ಹೈಡ್ ಯುವರ್ ಸೆಲ್ಫ್?' ಅಂತ ಸಮದ್ವನಿಯಲ್ಲಿ ಕೇಳಿದಾಗ ಬಲಗೈಯಿಂದ ಕಂಬನಿಯನ್ನು ತೊಡೆದುಕೊಳ್ಳುತ್ತಾ, 'ಪ್ಲೀಸ್ ಹಾಗೆಲ್ಲ ತಪ್ಪಾಗಿ ತಿಳೀಬೇಡ. ನೀನು ಮದುವೆಯಾಗಿ ಅಮೆರಿಕಕ್ಕೆ ಹೋದರೆ ನಿನ್ನನ್ನು ಕಳಕೊಳ್ಳುತ್ತೀನಲ್ಲ ಅಂತ ಅಳು ಬಂತು ಅಷ್ಟೆ. ನೀನು ಅದಕ್ಕೆಲ್ಲ ತಲೆ ಕೆಡಿಸಿಕೊಳ್ಳಬೇಡ. ಅಷ್ಟು ಒಳ್ಳೆ ಹುಡುಗ... ವೆಲ್ ಸೆಟಲ್ಡ್, ಮದುವೆ ಮಾಡ್ಕೋ... ಆಲ್ ದ ಬೆಸ್ಟ್'